# ರಾಮಕೃಷ್ಣ ಸುದ್ದಿ ಸಂಚಯ

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994



ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು–575 003.

Website : www.ramakrishnacredit.com Email : ho@ramakrishnacredit.com



ಸಂಪುಟ : IX ಸಂಚಿಕೆ : 1 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಎಪ್ರಿಲ್ –ಜೂನ್ 2023


## ಅಧ್ಯಕ್ಷರ ಮಾತು



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

2023–24ನೇ ಸಾಲಿನ ಮೊದಲ ತ್ರೈಮಾಸಿಕ ಅವಧಿ ಅಂತ್ಯ ದಿನಾಂಕ 30.06.2023ಕ್ಕೆ ಸಂಘವು ಎಲ್ಲಾ ವಿಭಾಗದಲ್ಲಿ ತೃಪ್ತಿಕರ ವೃದ್ಧಿಯನ್ನು ಠೇವಣಾತಿ ಮತ್ತು ಸಾಲ ವಿಭಾಗದಲ್ಲಿ ಸಾಧಿಸಿದೆ. ಈ ತ್ರೈಮಾಸಿಕ ಅವಧಿಯಲ್ಲಿ ಠೇವಣಿ ವೃದ್ಧಿಗೆ ಇನ್ನೂ ಹೆಚ್ಚಿನ ಪ್ರಯತ್ನಗಳು ಬೇಕಿತ್ತು. ಮುಂಬರುವ ಅವಧಿಯಲ್ಲಿ ಈ ಬಗ್ಗೆ ಗಮನಿಸಿಕೊಂಡು ಸಂಘವು ಪ್ರತಿ ತ್ರೈಮಾಸಿಕ ಅವಧಿಯಲ್ಲಿ ಎಲ್ಲಾ ಕಾರ್ಯ ವಿಭಾಗದಲ್ಲಿ ಉತ್ತಮ ಪ್ರಗತಿ ಸಾಧಿಸುವಂತಾಗಬೇಕು.

ಸಂಘವು ಈ ತ್ರೈಮಾಸಿಕ ಅವಧಿಯಲ್ಲಿ ಒಟ್ಟು ವ್ಯವಹಾರದಲ್ಲಿ ರೂ.850 ಕೋಟಿಯ ಮೈಲಿಗಲ್ಲನ್ನು ದಾಟಿರುವುದು. ದಿನಾಂಕ 30.06.2023ಕ್ಕೆ ರೂ.462 ಕೋಟಿ ಠೇವಣಿ ಮತ್ತು ರೂ.392 ಕೋಟಿ ಸಾಲದೊಂದಿಗೆ ರೂ.854 ಕೋಟಿ ಮೀರಿದ ವ್ಯವಹಾರವನ್ನು ದಾಖಲಿಸಿರುವುದು ಮಹತ್ತರ ಸಾಧನೆಯಾಗಿದೆ.

**ಸಂಘವು 30.06.2023ಕ್ಕೆ ಸಾಧಿಸಿದ ಪ್ರಗತಿಯನ್ನು**
**ದಿನಾಂಕ 30.06.2022ಕ್ಕೆ ಹೋಲಿಸಿಕೊಂಡು ಪ್ರಗತಿಯ ಪಕ್ಷಿನೋಟ ಈ ಕೆಳಗಿನಂತಿದೆ.**

### ಜೂನ್ 2022ಕ್ಕೆ ಹೋಲಿಸಿದಲ್ಲಿ ಜೂನ್ 2023ಕ್ಕೆ ಆಗಿರುವ ಪ್ರಗತಿಯ ಪಕ್ಷಿನೋಟ

| ಕ್ರ ಸಂ. | ಕಾರ್ಯ ವಿಭಾಗ | ಜೂನ್ 2022ಕ್ಕೆ ಇದ್ದಂತೆ | ಜೂನ್ 2023ಕ್ಕೆ ಇದ್ದಂತೆ | ಹೆಚ್ಚಳ (ರೂ) | ಶೇಕಡಾವಾರು ವೃದ್ಧಿ |
|---|---|---|---|---|---|
| 1 | ಠೇವಣಾತಿಗಳು | ರೂ.392 ಕೋಟಿ | ರೂ.462 ಕೋಟಿ | ರೂ.70 ಕೋಟಿ | 18% |
| 2 | ಸಾಲ ಮತ್ತು ಮುಂಗಡ | ರೂ.328 ಕೋಟಿ | ರೂ.392 ಕೋಟಿ | ರೂ.64 ಕೋಟಿ | 19% |
| 3 | ಒಟ್ಟು ವ್ಯವಹಾರ | ರೂ.720 ಕೋಟಿ | ರೂ.854 ಕೋಟಿ | ರೂ.134 ಕೋಟಿ | 19% |
| 4 | ನಿವ್ವಳ ಲಾಭ | ರೂ.1.30 ಕೋಟಿ | ರೂ.1.60 ಕೋಟಿ | ರೂ.30 ಲಕ್ಷ | 23% |
| 5 | ಅನುತ್ಪಾದಕ ಆಸ್ತಿ (ಶೇ.) | 1% | 0.40% | – | – |
| 6 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | – | – |

ಹೊಸ ಸಿಬ್ಬಂದಿಗಳಿಗೆ Orientation ಕಾರ್ಯಕ್ರಮ, ಸರ್ವ ಸಿಬ್ಬಂದಿಗಳ ಸಭೆ ನಡೆಸುವುದರ ಮೂಲಕ ಸಂಘದ ವ್ಯವಹಾರಾಭಿವೃದ್ಧಿಯಲ್ಲಿ ಶಾಖಾಧಿಕಾರಿಗಳೊಂದಿಗೆ ಶಾಖೆಯ ಪ್ರತಿ ಸಿಬ್ಬಂದಿಗಳ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

2023–24ನೇ ಸಾಲಿಗೆ ಶಾಖಾವಾರು ವ್ಯವಹಾರಿಕ ಗುರಿಗಳನ್ನು ಈಗಾಗಲೇ ನಿಗದಿಪಡಿಸಲಾಗಿದೆ. ನಿಗದಿಪಡಿಸಿರುವ 2023–24ನೇ ಸಾಲಿನ, ವರ್ಷಾಂತ್ಯ ಗುರಿಗಳಿಗೆ ಪೂರಕವಾಗಿ ಪ್ರತಿ ಮಾಸಿಕವಾಗಿ ಗುರಿಗಳನ್ನು ನಿಗದಿಪಡಿಸಿಕೊಂಡು ಅದನ್ನು ಸಾಧಿಸಿಕೊಂಡು ಬಂದು, ಪ್ರತಿ ತ್ರೈಮಾಸಿಕಕ್ಕೆ ಉತ್ತಮ ಪ್ರಗತಿಯನ್ನು ಹೊಂದಿ ವರ್ಷಾಂತ್ಯಕ್ಕೆ ನಿಗದಿತ ಎಲ್ಲಾ ಗುರಿಗಳನ್ನು ಸಾಧಿಸುವುದು. ಈ ನಿಟ್ಟಿನಲ್ಲಿ ಹೆಚ್ಚಿನ ಮುತುವರ್ಜಿಯಿಂದ ಕಾರ್ಯಪ್ರವೃತ್ತರಾಗಲು ಶಾಖಾಧಿಕಾರಿಯು ಸೇರಿದಂತೆ ಪ್ರತಿ ಸಿಬ್ಬಂದಿಗಳಿಗೆ ಕರೆ ನೀಡುತ್ತಿದ್ದೇವೆ.

(ಕೆ. ಜೈರಾಜ್ ಬಿ. ರೈ)
ಅಧ್ಯಕ್ಷರು

## ಸ್ಥಳಾಂತರಿತ ಕೈಕಂಬ ಶಾಖೆಯ ನೂತನ ಕಛೇರಿಯ ಉದ್ಘಾಟನೆ





ಸಂಘದ ಕೈಕಂಬ ಶಾಖೆಯನ್ನು ರಾಮಚಂದ್ರ ಕಟ್ಟಡ, ಗುರುಪುರ–ಕೈಕಂಬ, ಇದರ ಒಂದನೇ ಮಹಡಿಯ ನೂತನ ಕಛೇರಿಗೆ 09.06.2023ರ ಶುಕ್ರವಾರದಂದು ಸ್ಥಳಾಂತರಿಸಲಾಯಿತು. ನೂತನ ಕಛೇರಿಯನ್ನು ಉದ್ಘಾಟಿಸಿ ಮಾತನಾಡಿದ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ.ರೈಯವರು ಸಂಘದ ಪ್ರಗತಿ ಸಾಧನೆ ಬಗ್ಗೆ ತಿಳಿಸಿ, ಕೈಕಂಬ ಶಾಖೆಯ ವ್ಯವಹಾರಾಭಿವೃದ್ಧಿಗೆ ಸರ್ವರ ಸಹಕಾರ ಕೋರಿದರು. ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿಯವರ ಶುಭ ಸಂದೇಶವನ್ನು ವಾಚಿಸಿ, ನೂತನ ಕಛೇರಿಯ ಭದ್ರತಾ ಕೊಠಡಿಯ ಉದ್ಘಾಟನೆಯನ್ನು ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿ, ಭದ್ರತಾ ಕೋಶದ ಉದ್ಘಾಟನೆಯನ್ನು ಸಂಘದ ನಿರ್ದೇಶಕರಾದ ಶ್ರೀ ವಿಠಲ ಪಿ ಶೆಟ್ಟಿಯವರು ನೆರವೇರಿಸಿದರು.

ನೂತನ ಕಛೇರಿಯ ಪ್ರಥಮ ನಗದನ್ನು ಸಂಘದ ನಿರ್ದೇಶಕರಾದ ಶ್ರೀ ಯಂ ರಾಮಯ ಶೆಟ್ಟಿಯವರು ಸ್ವೀಕರಿಸಿದರು. ಪ್ರಥಮ ಠೇವಣಿ ಪತ್ರಗಳನ್ನು ಸಂಘದ ನಿರ್ದೇಶಕರಾದ ಶ್ರೀ ಪಿ ಬಿ. ದಿವಾಕರ ರೈ ಹಾಗೂ ಶ್ರೀ ಕುಂಬ್ರ ದಯಾಕರ ಆಳ್ವರವರು ವಿತರಿಸಿದರು. ನಿರ್ದೇಶಕರಾದ ಡಾ। ಎಂ. ಸುಧಾಕರ ಶೆಟ್ಟಿಯವರು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಕಟ್ಟಡ ಮಾಲಕರಾದ ಶ್ರೀ ರಾಜೇಶ್ ಪೈಯವರನ್ನು ಸಂಘದ ವತಿಯಿಂದ ಅಧ್ಯಕ್ಷರು ಗೌರವಿಸಿದರು ಹಾಗೂ ಶಾಖಾ ವ್ಯವಸ್ಥಾಪಕರಾದ ಶ್ರೀಮತಿ ವೀಣಾ ಸಿ. ಶೆಟ್ಟಿಯವರನ್ನು ಸನ್ಮಾನಿಸಲಾಯಿತು. ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ., ಸಹಾಯಕ ಮಹಾಪ್ರಬಂಧಕರಾದ ಮೋಹನ್‌ದಾಸ್ ಶೆಟ್ಟಿ ಹಾಗೂ ಶಾಖೆಯ ಗ್ರಾಹಕರು, ಸದಸ್ಯರು, ಹಿತೈಷಿಗಳು, ಅತಿಥಿಗಳು ಮುಂತಾದ ಗಣ್ಯರು ಉಪಸ್ಥಿತರಿದ್ದರು. ಸಂಘದ ಸಿಬ್ಬಂದಿ ಶ್ರೀ ಶಮಂತ್ ಟಿ. ರೈ ಕಾರ್ಯಕ್ರಮ ನಿರೂಪಿಸಿದರು.

## ಸಂಘದ ಹೊಸ ಸಿಬ್ಬಂದಿಗಳಿಗೆ Orientation Programme





ಸಂಘದ ಹೊಸ ಸಿಬ್ಬಂದಿಗಳಿಗೆ ಒಂದು ದಿನದ Orientation Programme ನ್ನು ದಿನಾಂಕ 29.06.2023 ರಂದು ಸಂಘದ ಕೇಂದ್ರ ಕಛೇರಿಯಲ್ಲಿ ಆಯೋಜಿಸಲಾಯಿತು. ಕರ್ಣಾಟಕ ಬ್ಯಾಂಕಿನ, ಸಿಬ್ಬಂದಿ ತರಬೇತಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರು ಹಾಗೂ ನಿವೃತ್ತ ಮಹಾಪ್ರಬಂಧಕರಾದ ಶ್ರೀ ಎಂ. ದಾಮೋದರ ಕಾಮತ್‌ರವರು ಸಂಪನ್ಮೂಲ ವ್ಯಕ್ತಿಯಾಗಿದ್ದರು.

## ಶ್ರೀ ಸವಣೂರು ಸೀತಾರಾಮ ರೈಯವರಿಗೆ ಹುಟ್ಟು ಹಬ್ಬದ ಶುಭಾಶಯ



ಸಂಘದ ನಿರ್ದೇಶಕರಾದ ಶ್ರೀ ಸವಣೂರು ಸೀತಾರಾಮ ರೈಯವರಿಗೆ, 76ನೇ ಹುಟ್ಟುಹಬ್ಬದ ಪ್ರಯುಕ್ತ ಆಡಳಿತ ಮಂಡಳಿ ವತಿಯಿಂದ ಆತ್ಮೀಯ ಗೌರವಾರ್ಪಣೆಯನ್ನು ಮಾಡಿ ಶುಭಾಶಯವನ್ನು ಸಲ್ಲಿಸಲಾಯಿತು.

## ಅಭಿನಂದನೆಗಳು

- ಸಂಘದ ಉಪ್ಪಿನಂಗಡಿ ಶಾಖೆಯ ಸಿಬ್ಬಂದಿ ಶ್ರೀಮತಿ ಮಿಸ್ರಿಯ ಪಿ.ಐ.ರವರು ಗಂಡು ಮಗುವಿನ ತಾಯಿಯಾಗಿದ್ದಾರೆ.
- ಸಂಘದ ಶಿರ್ವ ಶಾಖೆಯ ಸಿಬ್ಬಂದಿ ಶ್ರೀ ಭರತ್ ಎಸ್. ರವರ ನಿಶ್ಚಿತಾರ್ಥವು ಪ್ರಣಾಮ್ಯ ಶೆಟ್ಟಿರವರೊಂದಿಗೆ ಇತ್ತೀಚೆಗೆ ಜರಗಿತು.
- ಸಂಘದ ಕೇಂದ್ರ ಕಛೇರಿ ಸಿಬ್ಬಂದಿ ಶ್ರೀ ಶಮಂತ್ ಟಿ. ರೈಯವರ ನಿಶ್ಚಿತಾರ್ಥವು ಮನೀಷಾ ಶೆಟ್ಟಿರವರೊಂದಿಗೆ ಇತ್ತೀಚೆಗೆ ಜರಗಿತು.

**ಇವರಿಗೆ ಹಾರ್ದಿಕ ಅಭಿನಂದನೆಗಳು.**

## ಶ್ರದ್ಧಾಂಜಲಿ

- ಶ್ರೀಮತಿ ಗಿರಿಜಾ ಶೆಟ್ಟಿ (ಮುಡಿಪು ಶಾಖೆಯ ಶಾಖಾಧಿಕಾರಿ ಶ್ರೀ ತಿಮ್ಮಯ್ಯ ಶೆಟ್ಟಿಯವರ ತಾಯಿ),
- ಶ್ರೀ ನರಸಿಂಗ ರೈ (ಕೇಂದ್ರ ಕಛೇರಿಯ ವ್ಯವಸ್ಥಾಪಕ ಶ್ರೀ ದಿನೇಶ್ ರೈಯವರ ತಂದೆ)

**ದೈವಾಧೀನರಾಗಿರುವರು. ಅಗಲಿದ ದಿವ್ಯಾತ್ಮಕ್ಕೆ ಚಿರಶಾಂತಿ ಕೋರಿಕೊಂಡು ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.**

## ಕವನ

## ಬೆಳದಿಂಗಳ ಬಾಲೆ

**ಶ್ರೀ ಧನಂಜಯ್ ಕುಮಾರ್**
ಸಿಬ್ಬಂದಿ, ಸುರತ್ಕಲ್ ಶಾಖೆ

ಸುಂದರ ಚೆಲುವಿನ ಮಂದಾರ ಹೂವೆ
ಹುಣ್ಣಿಮೆ ಬೆಳಕಲಿ ಬೆಳಗುವೆ ನೀನೆ
ಕಾಣದ ನೀನು ಕಾಡುವೆ ಏನು
ಕಾಣುವ ವರೆಗೆ ಕಾಯುವೆ ನಾನು

ಇರಳಲು ಹೊಳೆಯುವ ಕಣ್ಣಿನ ನೋಟ
ಸೆಳೆಯುತ ಹೋಯ್ತು ನನ್ನಯ ಹೃದಯವ
ನಿನ್ನಯ ನಗುವಿನ ಚಿತ್ತವ ನೋಡಿ
ಕುಣಿಯುತ ಹಾಡಿತು ನನ್ನಯ ಮೈ ಮನ

ನಿನ್ನಯ ನಗುವಿನ ನೆನಪಿನ ಬುತ್ತಿ
ತುಂಬ ಬಲ್ಲುದೆ ಜೀವನ ಶಕ್ತಿ
ನನಗು ನಿನಗು ಇಲ್ಲದ ಪರಿಚಯ
ಆಗಬಲ್ಲುದೆ ಮನಗಳ ವಿನಿಮಯ

ಕಳೆದಿಲ್ಲ ಕ್ಷಣ ; ಆಡಲಿಲ್ಲ ಮಾತು
ಕುಳಿತಿರುವೆ ನಿನ್ನ ಬರುವಿಕೆಗೆ ಕಾದು
ಕನಸಲಿ ಕಾಡೊ ಮಿನುಗೊ ತಾರೆ
ನೀನೆ ನನ್ನಯ ಬೆಳದಿಂಗಳ ಬಾಲೆ



## ಹುಟ್ಟು ಹಬ್ಬದ ಶುಭಾಶಯಗಳು



| | |
|---|---|
| ಶ್ರೀಮತಿ ಲಕ್ಷ್ಮೀ ಜೆ. ಶೆಟ್ಟಿ | – ಉಪಾಧ್ಯಕ್ಷರು |
| ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ | – ನಿರ್ದೇಶಕರು |
| ಸವಣೂರು ಶ್ರೀ ಕೆ. ಸೀತಾರಾಮ ರೈ | – ನಿರ್ದೇಶಕರು |

## ಹುಟ್ಟು ಹಬ್ಬದ ಶುಭಾಶಯಗಳು

| ಸಿಬ್ಬಂದಿಗಳ ಹೆಸರು | ಶಾಖೆ | ಸಿಬ್ಬಂದಿಗಳ ಹೆಸರು | ಶಾಖೆ |
|---|---|---|---|
| ಶ್ರೀ ತಿಮ್ಮಯ್ಯ ಶೆಟ್ಟಿ | ಮುಡಿಪು | ಶ್ರೀ ಸುರೇಶ್ ನ್ಯಾಕ್ | ಮೂಡಬಿದ್ರಿ |
| ಶ್ರೀ ಚಂದ್ರಹಾಸ್ ಶೆಟ್ಟಿ | ಪುತ್ತೂರು | ಶ್ರೀಮತಿ ಮಮತಾ ಎಂ. | ಮಂಗಳೂರು |
| ಶ್ರೀ ದಿನೇಶ್ ಶೆಟ್ಟಿ | ಕಡಬ | ಶ್ರೀಮತಿ ಶ್ವೇತಾ | ಕೇಂದ್ರ ಕಛೇರಿ |
| ಶ್ರೀಮತಿ ವೈಶಾಲಿ | ವಿಟ್ಲ | ಶ್ರೀ ಮೋಹನ್ ಶೆಟ್ಟಿ | ಉಡುಪಿ |
| ಶ್ರೀ ದಿನೇಶ್ ರೈ | ಕೇಂದ್ರ ಕಛೇರಿ | ಶ್ರೀ ನವೀನ್ ಶೆಟ್ಟಿ | ಕೇಂದ್ರ ಕಛೇರಿ |
| ಶ್ರೀ ಸುಧೀರ್ ಕುಮಾರ್ ಡಿ. | ಚಿಲಿಂಬಿ | ಶ್ರೀ ಅಮಿತ್ ಕುಮಾರ್ | ಕೈಕಂಬ |
| ಶ್ರೀ ದಿತೇಶ್ ಶೆಟ್ಟಿ | ಮುಲ್ಕಿ | ಶ್ರೀಮತಿ ಅರುಣಾ ರೈ | ಚಿಲಿಂಬಿ |
| ಶ್ರೀ ಸುಭ್ರತ್ | ಹೆಬ್ರಿ | ಶ್ರೀಮತಿ ಶ್ರೀಲಕ್ಷ್ಮಿ | ಸುರತ್ಕಲ್ |
| ಶ್ರೀ ಜಯರಾಮ್ | ಬೈಂದೂರು | ಕು. ಸುಶ್ಮಿತಾ | ಉಡುಪಿ |
| ಶ್ರೀ ಪ್ರವೀಣ್ ರೈ | ಕಡಬ | ಕು. ಸುಮತಿ | ಬಿ.ಸಿ.ರೋಡ್ |
| ಶ್ರೀ ವಿರಾಜ್ ಜೆ. ಶೆಟ್ಟಿ | ಬ್ರಹ್ಮಾವರ | ಶ್ರೀಮತಿ ವಿದ್ಯಾಶ್ರೀ ಜಿ.ಎಸ್. | ಮುಡಿಪು |
| ಶ್ರೀಮತಿ ಮಮತಾ ಎಚ್. | ಉಪ್ಪಿನಂಗಡಿ | ಶ್ರೀ ಲಜಿತ್ ಶೆಟ್ಟಿ ಬಿ. | ಹಂಪನ್‌ಕಟ್ಟೆ |
| ಶ್ರೀ ಅಶೋಕ್ ಎಂ.ಕೆ. | ಮೂಡಬಿದ್ರಿ | ಕು। ಅಪೂರ್ವ | ವೆಲೆನ್ಸಿಯಾ |

**ಈ ತ್ರೈಮಾಸಿಕ ಅವಧಿಯಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ತಮಗೆಲ್ಲರಿಗೂ ಹುಟ್ಟುಹಬ್ಬದ ಹಾರ್ದಿಕ ಶುಭವನ್ನು ಕೋರುತ್ತೇವೆ.**



Private Circulation only

**BOOK POST**

To

.................................................................

.................................................................

.................................................................

If not delivered please return to **SRI RAMAKRISHNA CREDIT CO-OPERATIVE SOCIETY LTD.,**
2nd Floor, Amruthothsav Building, Bunts Hostel Circle, Mangalore – 575 003.